MANUVIKASA
Success Stories

# ಅಲ್ಪಕಾಲದಲ್ಲಿಯೇ ಮಹತ್ವದ ಸಾಧನೆ ಮಾಡಿರುವ ಸರಸ್ವತಿ ಸ್ವಸಹಾಯ ಸಂಘ

*ಸಾರಾಂಶ: ರಾಜ್ಯಮಟ್ಟದಲ್ಲಿ ಅತ್ಯುತ್ತಮ ಸ್ವಸಹಾಯ ಸಂಘವೆಂದು ಪ್ರಶಸ್ತಿ ಪಡೆದ ಸಂಘವಿದು. ಸಾಂಪ್ರದಾಯಿಕ ಹಸೆ ಕಲೆಯ ಪುನಶ್ಚೇತನ, ಕೃಷಿ ಯಂತ್ರಗಳ ಬಾಡಿಗೆ ಘಟಕ, ಸ್ಥಳೀಯ ಆಹಾರಗಳ ಉತ್ಪಾದನೆ, ಮೌಲ್ಯವರ್ಧನೆ ಮತ್ತು ಮಾರಾಟ . . . ಹೀಗೆ ಈ ಸಂಘದ ಹತ್ತು ಹಲವು.*

ಸಿದ್ದಾಪುರ ತಾಲ್ಲೂಕಿನ ಕಾಡೊಳಗೆ ಇರುವ ಗ್ರಾಮ ಹುಲಿಮನೆ. ತೋಟಗಳಲ್ಲಿ ದೂರ–ದೂರಕ್ಕೆ ಇರುವ ಮನೆಗಳು. ಇಲ್ಲಿನ ಹೆಣ್ಣುಮಕ್ಕಳ ಮನವೊಲಿಸಿ 2016ರಲ್ಲಿ ಮನುವಿಕಾಸ ಸಂಸ್ಥೆಯು ಒಂದು ಸಂಘ ರಚಿಸಿತು. ಪ್ರಸ್ತುತ ಸಂಘದಲ್ಲಿ 7 ಜನ ಸದಸ್ಯರಿದ್ದಾರೆ. ಕಳೆದ 6 ವರ್ಷಗಳಲ್ಲಿ ಈ 'ಸರಸ್ವತಿ ಮನುವಿಕಾಸ ಮಹಿಳಾ ಸ್ವಸಹಾಯ ಸಂಘ'ದ ಖ್ಯಾತಿ ದೆಹಲಿಯವರೆಗೂ ತಲುಪಿದೆ. ನೂತನ ಸಾಹಸಗಳಿಗೆ ಕೈಹಾಕುವ ಮೂಲಕ ತನ್ನ ವಿಶಿಷ್ಟ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಿರುವ ಹೆಮ್ಮೆ ಇವರದು.

**ಹಸೆ ಕಲೆ ಪುನಶ್ಚೇತನ:** ಹಸೆ ಕಲೆಯು ಸಿದ್ದಾಪುರ ಭಾಗದ ಸಾಂಪ್ರದಾಯಿಕ ಪದ್ಧತಿ. ಹೊಸತಲೆಮಾರುಗಳಲ್ಲಿ ಈ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲದೆ ಕ್ರಮೇಣ ಕಣ್ಮರೆಯಾಗುತ್ತಿದೆ. ಸಂಘದ ಲಕ್ಷ್ಮಿ ಗಣಪತಿ ಹಾಗೂ ಇನ್ನೂ ಕೆಲವು ಸದಸ್ಯರು ಕೈಜೋಡಿಸಿ ಇದನ್ನು ತನ್ನ ಮೂಲಸ್ವರೂಪದಲ್ಲಿ ಉಳಿಸಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಮುಖ್ಯವಾಗಿ ಬಟ್ಟೆಗಳ ಮೇಲೆ ಹಸೆ ಹಾಕಿ ಮಾರಾಟ ಮಾಡುತ್ತಿದ್ದಾರೆ.

**ಅಡಿಕೆ ಸಂಸ್ಕರಣಾ ಘಟಕ:** ಹುಲಿಮನೆಯಲ್ಲಿ ಅಡಿಕೆ ಬೆಳೆಗಾರರೇ ಹೆಚ್ಚು. ಇತ್ತೀಚಿನ ವರ್ಷಗಳಲ್ಲಿ ಅಡಿಕೆ ಇಳಿಸಲು, ಸುಲಿಯಲು ಹಾಗೂ ಬೇಯಿಸಲು ಕೆಲಸಗಾರರ ಕೊರತೆ ಹೆಚ್ಚಾಗಿದೆ. ಕೆಲವು ರೈತರು ಅನಿವಾರ್ಯವಾಗಿ ಹಸಿ ಅಡಿಕೆಯನ್ನೇ ಮಾರಾಟ ಮಾಡಿ ನಷ್ಟ ಮಾಡಿಕೊಳ್ಳುತ್ತಿದ್ದರು. ಇದನ್ನು ಗಮನಿಸಿದ ಸಂಘವು 2017–18ರಲ್ಲಿ ಅಡಿಕೆ ಸಂಸ್ಕರಣಾ ಘಟಕವನ್ನು ಸ್ಥಾಪಿಸಿತು. ಬಾಡಿಗೆ ಆಧಾರದ ಮೇಲೆ ಅಡಿಕೆಯನ್ನು ಸುಲಿದು ಕೊಡುವ ಯಂತ್ರಗಳನ್ನು ಹಾಕಿದ್ದರಿಂದ ಹತ್ತಾರು ರೈತರಿಗೆ ಉಪಯೋಗವಾಗಿದೆ.




**ಕೃಷಿ ಯಂತ್ರಗಳ ನಿರ್ವಹಣಾ ಘಟಕ:** ಅಡಿಕೆ ಸಂಸ್ಕರಣೆ ಯಂತ್ರವನ್ನು ಹಾಕಿ ಯಶಸ್ವಿಯಾದ ಸಂಘವು ಕೃಷಿಗೆ ಅಗತ್ಯವಾಗಿ ಬೇಕಾದ ಇತರೆ ಯಂತ್ರಗಳ ಘಟಕವನ್ನೂ ಹಾಕುವ ತೀರ್ಮಾನ ಮಾಡಿತು. ಒಕ್ಕಣೆ ಯಂತ್ರ, ಟ್ರ್ಯಾಕ್ಟರ್, ಭತ್ತ ಕಟಾವು ಯಂತ್ರ,

ಮರ ಕಡಿಯುವ ಯಂತ್ರ, ಟಿಲ್ಲರ್, ಕಳೆ ಕಟಾವು ಯಂತ್ರ ಇತ್ಯಾದಿ ಹಲವು ಯಂತ್ರಗಳನ್ನು ಪ್ರಸ್ತುತ ಖರೀದಿಸಿ ಬಾಡಿಗೆ ಆಧಾರದಲ್ಲಿ ನೀಡುತ್ತಿದ್ದಾರೆ. ಈ ಸೌಲಭ್ಯಗಳಂತೂ ಸುತ್ತ–ಮುತ್ತಲ ರೈತರಿಗೆ ತುಂಬಾ ಉಪಯೋಗವಾಗಿವೆ. ಇದಕ್ಕೆ 10 ಲಕ್ಷ ರೂ. ವೆಚ್ಚವಾಗಿದ್ದು ಸಂಘದಿಂದ 2 ಲಕ್ಷ ಭರಿಸಲಾಗಿದೆ, ಉಳಿಕೆ ಮೊತ್ತವನ್ನು ಕೃಷಿ ಇಲಾಖೆಯು ಸಬ್ಸಿಡಿ ರೂಪದಲ್ಲಿ ನೀಡಿದೆ. ಸಂಘದ ಅಧ್ಯಕ್ಷರಾದ ಲಕ್ಷ್ಮಿ ಅವರು ತಮ್ಮ ಶೆಡ್ ಅನ್ನು ಈ ಘಟಕ ಸ್ಥಾಪನೆಗೆ ನೀಡಿದ್ದಾರೆ. ಈ ಘಟಕವು ಇತ್ತೀಚೆಗಷ್ಟೇ ಆರಂಭವಾಗಿದೆ(2022).

**ಅಲಂಕಾರಿಕ ವಸ್ತುಗಳ ತಯಾರಿಕೆ:** ಸಂಘದ ಸದಸ್ಯರೆಲ್ಲಾ ಸೇರಿ ಮನೆ ಅಲಂಕಾರಿಕ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುತ್ತಾರೆ. ಹಳೆಯ ಬಟ್ಟೆ, ನಾರು, ಹುಲ್ಲು ಹಾಗೂ ಇನ್ನಿತರ ಕಚ್ಚಾ ವಸ್ತುಗಳಿಂದ ಗೊಂಬೆಗಳು, ತೋರಣ, ಬ್ಯಾಗುಗಳು, ಮ್ಯಾಟ್, ಹೂದಾನಿ ಇತ್ಯಾದಿ ತಯಾರಿಸಲಾಗುತ್ತಿದೆ.

**ಮೌಲ್ಯವರ್ಧನೆ:** ಹುಲಿಮನೆ ಸುತ್ತಲ ಕಾಡಿನಲ್ಲಿ ಯತೇಚ್ಚ ಹಲಸು ದೊರೆಯುತ್ತದೆ. ಸಂಘದ ಸದಸ್ಯರು ಕಾಯಿ ಮತ್ತು ಹಣ್ಣುಗಳನ್ನು ಸಂಗ್ರಹಿಸಿ ಹಲಸಿನ ಚಿಪ್ಸ್, ಹಪ್ಪಳ ಹಾಗೂ ಜಾಮ್ ತಯಾರಿಸುತ್ತಿದ್ದಾರೆ. ಮನುವಿಕಾಸದಿಂದ ಈ ಪದಾರ್ಥಗಳ ತಯಾರಿಕೆ, ಪ್ಯಾಕಿಂಗ್, ತಯಾರಿಕೆ ಸಂದರ್ಭದಲ್ಲಿ ಸ್ವಚ್ಚತೆ ಕಾಪಾಡುವಿಕೆ ಬಗ್ಗೆ ತರಬೇತಿ ನೀಡಲಾಗಿದೆ. ಕಳೆದ ವರ್ಷ (2021) 10 ಸಾವಿರ ಹಲಸಿನ ಹಪ್ಪಳ, 80 ಕೇಜಿ ಚಿಪ್ಸ್ ಹಾಗೂ 15 ಕೇಜಿ ಜಾಮ್ ತಯಾರಿಸಿ ಮಾರಾಟ ಮಾಡಿದ್ದಾರೆ. ಪ್ರತಿ ಕೇಜಿ ಜಾಮ್ 500 ರೂ. ಬೆಲೆಗೆ, ಚಿಪ್ಸ್ ಕೇಜಿಗೆ 400 ರೂ. ಹಾಗೂ ಹಪ್ಪಳವನ್ನು 2 ರೂ.ಗೆ ಒಂದರಂತೆ ಮಾರಾಟ ಮಾಡಲಾಗಿದೆ. ಜಾಮ್ ಮಾರಾಟದಿಂದ 7500 ರೂ., ಚಿಪ್ಸ್ ಮಾರಾಟದಿಂದ 32000 ರೂ. ಹಾಗೂ ಹಪ್ಪಳ ಮಾರಾಟದಿಂದ 20000 ರೂ. ಆದಾಯವು ಸಂಘಕ್ಕೆ ದೊರೆತಿದೆ. ಒಟ್ಟು ಆದಾಯ 59500 ರೂ. ಹಲಸು ಉಚಿತವಾಗಿ ಲಭ್ಯವಿರುವುದರಿಂದ ಇವರಿಗೆ ಶೇ. 80ರಷ್ಟು ನಿವ್ವಳ ಆದಾಯ ದೊರೆಯುತ್ತಿದೆ. ಎಲ್ಲರೂ ಸೇರಿ ಈ ಕೆಲಸವನ್ನು ನಿರ್ವಹಿಸುತ್ತಿದ್ದು, ಬಂದ ಆದಾಯವನ್ನೂ ಸಹ ಎಲ್ಲರೂ ಸಮಾನವಾಗಿ ಹಂಚಿಕೊಳ್ಳುತ್ತಾರೆ.

**ಮಾರಾಟ ಪ್ರಯತ್ನ:** ಸಂಘವು ರಾಜ್ಯದ 'ಸಂಜೀವಿನಿ' ಯೋಜನೆ (ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಶನ್)ಯಡಿ ಸದಸ್ಯತ್ವ ಪಡೆದುಕೊಂಡಿದ್ದು ಆ ಯೋಜನೆಯಿಂದಲೂ ಸಹ ವಿವಿಧ ತರಬೇತಿಗಳು ಲಭ್ಯವಾಗುತ್ತಿವೆ. ಯೋಜನೆಯ ಗ್ರಾಮ ಪಂಚಾಯ್ತಿ ಮಟ್ಟದ ಒಕ್ಕೂಟದ ಮೂಲಕ ಸಾಲ–ಸೌಲಭ್ಯಗಳು ದೊರೆಯುತ್ತಿವೆ. 2019ರಲ್ಲಿ ಯೋಜನೆ ಮೂಲಕ ದೆಹಲಿಯಲ್ಲಿ ನಡೆದ 'ಸರಸ್ ಮೇಳ'ದಲ್ಲಿ ಸರಸ್ವತಿ ಸಂಘವು ಭಾಗವಹಿಸಿ ಸುಮಾರು 1.5 ಲಕ್ಷ ರೂ.ಗಳ ವ್ಯಾಪಾರ ನಡೆಸಿತ್ತು. ಅಲ್ಲದೆ ಸಂಜೀವಿನಿ ನೀಡುವ 'ರಾಜ್ಯ ಮಟ್ಟದ ಅತ್ಯುತ್ತಮ ಸಂಘ' ಪ್ರಶಸ್ತಿಯನ್ನೂ ಸಹ ಇವರ ಸಂಘವು ಪಡೆದುಕೊಂಡಿರುವುದು ವಿಶೇಷ.




**ಭವಿಷ್ಯದ ಯೋಜನೆಗಳು:** ಸಂಘವು ಸ್ಥಾಪಿಸಿರುವ ಅಡಿಕೆ ಸಂಸ್ಕರಣಾ ಘಟಕ ಯಶಸ್ವಿಯಾಗಿ ನಡೆಯುತ್ತಿದೆ. ಈಗ ತಾನೆ ಸ್ಥಾಪಿಸಿರುವ ಕೃಷಿ ಯಂತ್ರಗಳ ಘಟಕವನ್ನು ಲಾಭದಾಯಕವಾಗಿ ಮುನ್ನಡೆಸುವ ಮತ್ತು ನಿರ್ವಹಿಸುವ ಹೊಣೆಗಾರಿಕೆ ಇವರ ಮೇಲಿದೆ. ಇದಕ್ಕೆ ಸೂಕ್ತ ತಯಾರಿಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಘಟಕದ ಬಗ್ಗೆ ಹೆಚ್ಚಿನ ರೈತರಿಗೆ ಮಾಹಿತಿ ತಿಳಿಯುವಂತೆ ಮಾಡಲು ಕರಪತ್ರ ಮುದ್ರಿಸಿ ಹಂಚುವ ಆಲೋಚನೆ ಇವರದು. ಹೆಚ್ಚು ರೈತರು ಬಳಸಿದರೆ ಲಾಭ ಬರಲು ಸಾಧ್ಯ ಎಂಬ ಅರಿವು ಇವರಿಗಿದೆ. ಇದರ ಜೊತೆಗೆ ಗ್ರಾಮದಲ್ಲಿ ಅಡಿಕೆ ಸಸಿಗಳಿಗೆ ಹೆಚ್ಚಿನ ಬೇಡಿಕೆ ಇದ್ದು ಒಂದು ವ್ಯವಸ್ಥಿತ ನರ್ಸರಿ ಮಾಡುವ ಬಗ್ಗೆ ಸಂಘವು ಕ್ರಿಯಾ ಯೋಜನೆ ರೂಪಿಸುತ್ತಿದೆ. ಅಡಿಕೆ ಸಸಿ ಬೆಳೆಸುವ ಕೌಶಲ ಹಾಗೂ ಜ್ಞಾನ ಎಲ್ಲರಿಗೂ ಇರುವುದರಿಂದ ನಿರ್ವಹಣೆ ಕಷ್ಟವಾಗುವುದಿಲ್ಲ ಎಂಬುದು ಇವರ ಅನಿಸಿಕೆ. ಹಾಗೆಯೇ ಹೊಲಿಗೆ ಮತ್ತು ಅಣಬೆ ತರಬೇತಿ ಪಡೆಯುವ ಬಗ್ಗೆಯೂ ಇವರಿಗೆ ಆಸಕ್ತಿ ಇದೆ.

ಇವರ ಆಲೋಚನೆಗಳಿಗೆ ಮನುವಿಕಾಸದ ಬೆಂಬಲ ಇರುವುದರಿಂದ ಅಂದುಕೊಂಡಿದ್ದನ್ನು ಸಾಧಿಸುವ ಹುಮ್ಮಸ್ಸು ಸಂಘದ ಎಲ್ಲ ಸದಸ್ಯರಲ್ಲಿದೆ. ಸಂಘಕ್ಕೆ ಲಕ್ಷ್ಮಿ ಅಧ್ಯಕ್ಷರಾಗಿದ್ದು, ಗಾಯತ್ರಿ ಅಣ್ಣಪ್ಪನಾಯ್ಕ ಕಾರ್ಯದರ್ಶಿಯಾಗಿದ್ದಾರೆ. ಗೌರಮ್ಮ, ಜಯಲಕ್ಷ್ಮಿ, ಪವಿತ್ರ, ಶಕುಂತಲ ಹಾಗೂ ತುಂಗಭದ್ರ ಸದಸ್ಯರು.

**ಸಂಪರ್ಕ**

ಲಕ್ಷ್ಮಿ ಗಣಪತಿ
ಅಧ್ಯಕ್ಷರು, ಹುಲಿಮನೆ, ಬೇಡಕಣಿ ಗ್ರಾ.ಪಂ.
ಸಿದ್ದಾಪುರ ತಾ.